# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು – 570 006

ಪ್ರವೇಶಾತಿ ವಿಭಾಗ

ದಿನಾಂಕ:16.03.2023

## ಬಿ.ಇಡಿ ಪ್ರವೇಶಾತಿ ಕೌನ್ಸಲಿಂಗ್ ಸೂಚನೆಗಳು:

2022-23ರ ಜನವರಿ ಆವೃತ್ತಿಯ ಬಿ.ಇಡಿ ಶಿಕ್ಷಣಕ್ರಮದ ಪ್ರವೇಶಾತಿ ಸಂಬಂಧದಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಭೌತಿಕ ದಾಖಲೆಗಳ ಪರಿಶೀಲನೆ/ಕೌನ್ಸಲಿಂಗ್/ಪ್ರವೇಶಾತಿಗೆ ಸೂಚನೆಗಳು:

1. ಬಿ.ಇಡಿ ಶಿಕ್ಷಣಕ್ರಮದ ಪ್ರವೇಶಾತಿ ಪ್ರಕ್ರಿಯೆಯು ಸಂಪೂರ್ಣವಾಗಿ ಭೌತಿಕ ಪರಿಶೀಲನೆ ಇರುತ್ತದೆ. ಪ್ರವೇಶಾತಿ ಸಮಾಲೋಚನೆ (ಕೌನ್ಸಿಲಿಂಗ್) ಗಾಗಿ ಮೈಸೂರಿಗೆ ಬರುವುದು.
2. ಅಭ್ಯರ್ಥಿಗಳು ಆಯ್ಕೆಯಾಗಿರುವ ವರ್ಗಗಳಿಗೆ (ಸೀಟ್ ಮ್ಯಾಟ್ರಿಕ್ಸ್‌ನಲ್ಲಿರುವಂತೆ - ಮೀಸಲಾತಿ/ ಒಳಮೀಸಲಾತಿ) ಸಂಬಂಧಿಸಿದ ಮೂಲ ದಾಖಲಾತಿಗಳೊಂದಿಗೆ ಶೈಕ್ಷಣಿಕ ಅರ್ಹತೆಗಳ ಅಂಕಪಟ್ಟಿಗಳು, ಪ್ರಮಾಣ ಪತ್ರಗಳನ್ನು ಸ್ವಯಂ ದೃಢೀಕರಣ ಮಾಡಿ ಸಮಾಲೋಚನಾ ಸಮಯದಲ್ಲಿ ಒಂದು ಸೆಟ್ ಛಾಯಾಪ್ರತಿಯನ್ನು ಹಾಜರುಪಡಿಸಬೇಕಿರುತ್ತದೆ. ಇದು ಈಗಾಗಲೇ ಪ್ರಕಟಿಸಿರುವ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ವಿವಿಧ ವರ್ಗಗಳಡಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
3. ಆಯ್ಕೆಯಾದ ಅಭ್ಯರ್ಥಿಯು ವಿವಿ ನಿಲಯವು ನಿಗದಿಪಡಿಸಿರುವ 10 ಬಿ.ಇಡಿ ಅಧ್ಯಯನ ಕೇಂದ್ರಗಳಲ್ಲಿ ಒಂದನ್ನು ಮೆರಿಟ್ ಆಧಾರದ ಮೇಲೆ ಸಮಾಲೋಚನಾ ಕಾರ್ಯಕ್ರಮದಲ್ಲಿ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಒಂದು ಅಧ್ಯಯನ ಕೇಂದ್ರವನ್ನು ಅಭ್ಯರ್ಥಿಗಳೇ ಆಯ್ಕೆ ಮಾಡಿಕೊಳ್ಳಬೇಕಾಗಿರುತ್ತದೆ. ಒಂದು ಬಾರಿ ಆಯ್ಕೆ ಮಾಡಿಕೊಂಡ ಅಧ್ಯಯನ ಕೇಂದ್ರವನ್ನು ಯಾವುದೇ ಕಾರಣಕ್ಕೂ ಬದಲಾಯಿಸುವುದಿಲ್ಲ.
4. ಆಯ್ಕೆಯಾಗಿರುವ ಅಭ್ಯರ್ಥಿಗಳು ಸಮಾಲೋಚನಾ ಸಮಯದಲ್ಲಿ ಹಾಜರುಪಡಿಸಿರುವ ಮೂಲ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯವು ಪರಿಶೀಲಿಸಿ, ಆಯ್ಕೆಗೆ ಅರ್ಹರೆಂದು ಕಂಡುಬಂದಲ್ಲಿ ಪ್ರಾವಿಷನಲ್ ಪ್ರವೇಶಾತಿಗೆ ಅನುಮತಿಸಲಾಗುವುದು. ಅಂತಹ ಅಭ್ಯರ್ಥಿಗಳು ತಕ್ಷಣವೇ ಪ್ರವೇಶ ಶುಲ್ಕ (ರೂ.29,250/-) ವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. ಕಾಲಾವಕಾಶಕ್ಕೆ ಅವಕಾಶವಿರುವುದಿಲ್ಲ.
5. ಪ್ರವೇಶಾತಿ ಶುಲ್ಕವನ್ನು ಒಂದೇ ಕಂತಿನಲ್ಲಿ ಪಾವತಿಸಬೇಕು. ಯಾವುದೇ ಶುಲ್ಕ ವಿನಾಯಿತಿ ಇರುವುದಿಲ್ಲ. ಒಮ್ಮೆ ಪಾವತಿಸಿದ ಪ್ರವೇಶಾತಿ ಶುಲ್ಕವನ್ನು ಯಾವುದೇ ಕಾರಣಗಳಿಂದ ಹಿಂಪಾವತಿಸುವುದಿಲ್ಲ.
6. ಆಯ್ಕೆಯಾದ ಅಭ್ಯರ್ಥಿಗಳಲ್ಲಿ ದಿನಾಂಕ:23.03.2023ರಂದು ಬೆಳಗ್ಗೆ 9.00 ಗಂಟೆಗೆ 01 ರಿಂದ 250 ಮಂದಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಲಾಗುವುದು. ಅಂತಹ ಅಭ್ಯರ್ಥಿಗಳು ಮಾತ್ರ ವಿ.ವಿ.ನಿಲಯದ ಕಾವೇರಿ ಸಭಾಂಗಣದಲ್ಲಿ ತಮ್ಮ ನೊಂದಣಿಯನ್ನು ಮಾಡಿಸಿಕೊಳ್ಳುವುದು.
7. ಆಯ್ಕೆಯಾದ ಅಭ್ಯರ್ಥಿಗಳಲ್ಲಿ ದಿನಾಂಕ:24.03.2023ರಂದು ಬೆಳಗ್ಗೆ 9.00 ಗಂಟೆಗೆ 251 ರಿಂದ 500 ಮಂದಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಲಾಗುವುದು. ಅಂತಹ ಅಭ್ಯರ್ಥಿಗಳು ಮಾತ್ರ ವಿ.ವಿ.ನಿಲಯದ ಕಾವೇರಿ ಸಭಾಂಗಣದಲ್ಲಿ ತಮ್ಮ ನೊಂದಣಿಯನ್ನು ಮಾಡಿಸಿಕೊಳ್ಳುವುದು.

17/03/2023

ಕುಲಸಚಿವ

17-03-2023



Scanned with CamScanner